ಡಿಸಿಎಂ ಡಿಕೆಶಿ ವಿರುದ್ಧ ಬಿಜೆಪಿ ಪ್ರತಿಭಟನೆ

ಮಾಜಿ ಶಾಸಕ ಸಂಜಯ ಪಾಟೀಲ ನೇತೃತ್ವದಲ್ಲಿ ನಡೆದ ಪ್ರತಿಭಟನೆ, ಆಕ್ರೋಶ

• **ಕನ್ನಡಪ್ರಭ ವಾರ್ತೆ** ಬೆಳಗಾವಿ

ಮುಸ್ಲಿಮರಿಗಾಗಿ ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ನೀಡಿರುವ ಹೇಳಿಕೆಖಂಡಿಸಿನಗರದಲ್ಲಿಮಂಗಳವಾರಬಿಜೆಪಿಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಾಜಿ ಶಾಸಕ ಸಂಜಯ ಪಾಟೀಲ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ ಅವರ ಪ್ರತಿಕೃತಿಯನ್ನು ದಹನಗೊಳಿಸಿ ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು. ರಾಜ್ಯ ಕಾಂಗ್ರೆಸ್ ಸರ್ಕಾರ ಓಟ ಬ್ಯಾಂಕ್‌ಗಾಗಿ ಮುಸ್ಲಿಮರನ್ನು ಓಲೈಕೆ ಮಾಡುತ್ತಿದೆ. ಸರ್ಕಾರಿ ಗುತ್ತಿಗೆಗಳಲ್ಲಿ ಮೀಸಲಾತಿ ಕಲ್ಪಿಸಲಾಗಿದೆ. ಅಸಂಖ್ಯಾತ ಹಿಂದುಗಳಿಗೆ ರಾಜ್ಯಸರ್ಕಾರ ಅನ್ಯಾಯ ಮಾಡಿದೆ. ಈಗ ಮುಸ್ಲಿಮರಿಗಾಗಿ ಸಂವಿಧಾನವನ್ನು ಬದಲಾಯಿಸುತ್ತೇವೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ ಹೇಳಿಕೆ ನೀಡಿರುವುದು ಖಂಡನೀಯ. ಕೂಡಲೇ ಅವರು ಬಹಿರಂಗವಾಗಿ ಕ್ಷಮೆಕೇಳಬೇಕು ಎಂದು ಆಗ್ರಹಿಸಿದರು.

ಬೆಳಗಾವಿ ಗ್ರಾಮೀಣ ಮಂಡಲ ಅಧ್ಯಕ್ಷ ಯುವರಾಜ ಜಾಧವ, ಎಸ್.ಸಿ ಮೋರ್ಚಾ ಜಿಲ್ಲಾಧ್ಯಕ್ಷ ಯಲ್ಲೇಶ್ ಕೊಲಕಾರ, ವೈದ್ಯಕೀಯ ಪ್ರಕೋಷ್ಠದ ಜಿಲ್ಲಾ ಸಂಚಾಲಕರಾದ ಗುರುಪ್ರಸಾದ ಕೋತಿನ್, ಜಿಲ್ಲಾ ಕೋಶಾಧ್ಯಕ್ಷ ಸಂತೋಷ ದೇಶನೂರ, ಬಿಜೆಪಿ ಮುಖಂಡರಾದ ವಿಠ್ಠಲ ಸಾಯನ್ನವರ, ವೀರಭದ್ರಯ್ಯ ಪೂಜಾರ, ಮಲ್ಲಪ್ಪಾ ಕಾಂಬಳೆ, ಮಾರುತಿ ಜೋಗಾನಿ, ವಿಕ್ರಮ ಸೋನಜಿ, ರಾಜದೀಪ ಜಾಧವ,ಅಡವೇಶ ಅಂಗಡಿ, ನಿತಿನ್ ದೇಸಾಯಿ ಪಿರಾಜಿ ಕಣಬರ್ಗಿ, ಶೇಖರ ಕಾಲೇರಿ, ಅಭಯ ಅವಲಕ್ಕಿ ಸೇರಿದಂತೆ ಕಾರ್ಯಕರ್ತರು ಉಪಸ್ಥಿತರಿದ್ದರು.

ಸವದತ್ತಿಯಲ್ಲಿ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಸವದತ್ತಿ

ಎಸ್‌ಸಿಪಿ, ಎಸ್‌ಟಿಪಿ ಮೀಸಲು ಹಣವನ್ನು ದುರ್ಬಳಕೆ ಮಾಡಿ ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಶೇ.4ರಷ್ಟು ಮೀಸಲಾತಿ ನೀಡಿ ಉಳಿದ ಸಮುದಾಯದವರಿಗೆ ಅನ್ಯಾಯ ಮಾಡುತ್ತಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಕಾರ್ಯಕರ್ತರು ಪಟ್ಟಣದ ಎಪಿಎಂಸಿ ವೃತ್ತದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಗುತ್ತಿಗೆ ಮೀಸಲಾತಿ ನೀಡಲು ಸಂವಿಧಾನ ತಿದ್ದುಪಡಿ ಮಾಡಿಯಾದರೂ ಜಾರಿ ಮಾಡಲಾಗುತ್ತದೆ ಎಂಬ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿಕೆಯನ್ನು ಪ್ರತಿಭಟನೆಯಲ್ಲಿ ಖಂಡಿಸಲಾಯಿತು. ಬಿಜೆಪಿ ನಾಯಕ ಜಗದೀಶ ಶಿಂತ್ರಿ ಮಾತನಾಡಿ, ಒಂದು ಕೋಮಿನವರನ್ನು ಮಾತ್ರ ಓಲೈಸುವ ನಿಟ್ಟಿನಲ್ಲಿ ಕಾಂಗ್ರೆಸ್ ಸರ್ಕಾರವು ಉಳಿದ ಸಮುದಾಯಗಳಿಗೆ ದ್ರೋಹ ಮಾಡುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು. ಡಾ.ನಯನಾ ಭಸ್ಮೆ ಮಾತನಾಡಿ, ಗುತ್ತಿಗೆ ನೀಡುವಲ್ಲಿ ಮುಸ್ಲಿಮರಿಗೆ ಶೇ.4ರಷ್ಟನ್ನು ಮೀಸಲಿಡಲು ಇಂದಿನ ಸರ್ಕಾರದ ಉಪ ಮುಖ್ಯಮಂತ್ರಿ ಡಿಕೆಶಿಯವರು ಸಂವಿಧಾನವನ್ನೇ ಬದಲಿಸಲು ಹೊರಟಿರುವುದು ವಿಪರ್ಯಾಸದ ಸಂಗತಿ ಎಂದು ಕಿಡಿಕಾರಿದರು. ಪ್ರತಿಭಟನೆಯಲ್ಲಿ ಜಗದೀಶ ಕೌಜಗೇರಿ, ಕುಮಾರಸ್ವಾಮಿ ತಲ್ಲೂರಮಠ, ರಾಜು ನಿಡವಣಿ, ಈರಣ್ಣ ಚಂದರಗಿ, ಮಲ್ಲೇಶ ಸುಳೇಭಾವಿ, ಶಾಲಿನಿ ಈಳಿಗೇರ, ಮೈತ್ರಾ ಹೊಂಗಲ, ಗುರುನಾಥ ಗಂಗಲ, ಮಹಾದೇವ ಮುರಗೋಡ, ಮಲ್ಲಿಕಾರ್ಜುನ ಬೀಳಗಿ, ಉಮೇಶ ಭೀಮನ್ನವರ, ಬಸವರಾಜ ಶಿಗ್ಗಾಂವಿ, ಸಂಜು ಉಡಕೇರಿ, ಪ್ರಕಾಶ ಲಮಾಣಿ, ರಾಜು ಲಮಾಣಿ, ಮಹಾಂತೇಶ ಸುಬೇದಾರ, ಪುಂಡಲೀಕ ಮಾದರ, ಸಂಗಪ್ಪ ಮಜ್ಜಗಿ, ಸಿದ್ದನಗೌಡ ಪಾಟೀಲ, ಸಿಂಗಣ್ಣ ಚಿನಿವಾಲರ, ಶರಣು ಮೇಟಿ,ಕಾರ್ಯಕರ್ತರು ಉಪಸ್ಥಿತರಿದ್ದರು.

ಬೈಲಹೊಂಗಲದಲ್ಲಿ ಪ್ರತಿಭಟನೆ

• **ಕನ್ನಡಪ್ರಭ ವಾರ್ತೆ** ಬೈಲಹೊಂಗಲ

ಮುಸ್ಲಿಂರಿಗಾಗಿ ಸಂವಿಧಾನವನ್ನು ಬದಲಾವಣೆ ಮಾಡುತ್ತೇವೆ ಎಂದು ಹೇಳಿದ ಡಿಸಿಎಂ ಹಾಗೂ ಕಾಂಗ್ರೆಸ್ ಪಕ್ಷದ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್‌ಹೇಳಿಕೆ ಖಂಡಿಸಿ ಬೈಲಹೊಂಗಲದಲ್ಲಿ ಬಿಜೆಪಿ ಮಂಡಲ ವತಿಯಿಂದ ಪ್ರತಿಭಟಿಸಲಾಯಿತು.

ಬಿಜೆಪಿ ಮುಖಂಡ ವಿಜಯ ಮೆಟಗುಡ್ಡ, ಮಂಡಲ ಅಧ್ಯಕ್ಷ ಸುಭಾಷ್ ತುರಮರಿ ಮಾತನಾಡಿ, ಮುಸ್ಲಿಂ ಸಮಾಜಕ್ಕೆ ಶೇ.4 ರಷ್ಟು ಸರ್ಕಾರಿ ಗುತ್ತಿಗೆಯಲ್ಲಿ ಮೀಸಲಾತಿ, ಅಲ್ಪಸಂಖ್ಯಾತರ ಅನುಕೂಲಕ್ಕಾಗಿ ಸಂವಿಧಾನ ಬದಲಾವಣೆಯ ಹೇಳಿಕೆ ನೀಡಿರುವ ಕಾಂಗ್ರೆಸ್ ನಾಯಕ ಹಾಗೂ ಕಾಂಗ್ರೆಸ್ ಸಂವಿಧಾನದ ವಿರೋಧಿ ಎಂದು ಸಾಬೀತಾಗಿದೆ. ಅಂಬೇಡ್ಕರ್‌ಅವರು ರಚಿಸಿದ ಸಂವಿಧಾನ ಬದಲಿಸುವ ವಿಚಾರದ ಸರಕಾರ ಜನವಿರೋಧಿ ಸರ್ಕಾರವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಸಂಗೊಳ್ಳಿ ರಾಯಣ್ಣ ಸರ್ಕಲ್ ದಲ್ಲಿ ಭಾ.ಜ.ಪಾ ಕಾರ್ಯಕರ್ತರು ಡಿ.ಕೆ.ಶಿವಕುಮಾರ್‌ಅವರ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಗುರುಪಾದ ಕಳ್ಳಿ, ಸುನಿಲ ಮರಕುಂಬಿ, ರೈತ ಮೋರ್ಚಾ ಜಿಲ್ಲಾಧ್ಯಕ್ಷ ಜಗದೀಶ್ ಬೂದಿಹಾಳ, ಜಿಲ್ಲಾ ಮಾಧ್ಯಮ ಪ್ರಮುಖ್ ಸಚಿನ ಕಡಿ, ಲಕ್ಕಪ್ಪಕಾರಗಿ, ವಿಶಾಲ ಬೋಗೂರ, ಪ್ರಶಾಂತ್ ಅಮ್ಮಿನಭಾವಿ, ಅಜ್ಜಪ್ಪ ಹೊಸೂರ, ಗೌಡಪ್ಪ ಹೊಸಮನಿ, ನಾಗಪ್ಪ ಸಂಗೊಳ್ಳಿ, ಉಮೇಶ ಬೋಳಣ್ಣವರ, ಸದಾಶಿವಗೌಡ ಪಾಟೀಲ, ಆತ್ಮಾನಂದ ಅಬ್ಬಾಯಿ, ಪುಂಡಲೀಕ ಭಜಂತ್ರಿ, ಶ್ರೀಶೈಲ ಕಟ್ಟಿಮನಿ, ರವಿ ತುರಮರಿ, ಕಿರಣ್ ಶೀಲವಂತರ, ಪ್ರವೀಣ್ ಶಿಂಗಾರಿ, ಸಿ.ಜಿ.ವಿಭೂತಿಮಠ, ರಾಜು ಗುಡಿಮನಿ, ಪರಶುರಾಮ ರಾಯಭಾಗ, ಮಡಿವಾಳ ಬಡ್ಲಿ, ವಿರೇಶ ಬೂಶಣ್ಣವರ, ಸಂಗಪ್ಪ ಮುನವಳ್ಳಿ ಹಾಗೂ ಪ್ರಮುಖ ಪದಾಧಿಕಾರಿಗಳು ಇದ್ದರು.

ಕಿತ್ತೂರಿನಲ್ಲಿ ಡಿಕೆಶಿ ಪ್ರತಿಕೃತಿ ದಹಿಸಿ ಬಿಜೆಪಿ ಆಕ್ರೋಶ

• **ಕನ್ನಡಪ್ರಭ ವಾರ್ತೆ** ಚನ್ನಮ್ಮನ ಕಿತ್ತೂರು

ಡಿಸಿಎಂ ಡಿ.ಕೆ.ಶಿವಕುಮಾರ ಹೇಳಿಕೆ ಖಂಡಿಸಿ ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ನೇತೃತ್ವದಲ್ಲಿ ಮಂಗಳವಾರ ಇಲ್ಲಿಯ ಹೆದ್ದಾರಿ ಪಕ್ಕದ ಚನ್ನಮ್ಮಾಜಿಯ ವರ್ತುಳದಲ್ಲಿ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಡಿಕೆಶಿ ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಮಹಾಂತೇಶ ದೊಡ್ಡಗೌಡರ ಮಾತನಾಡಿ, ಸಂವಿಧಾನವನ್ನು ಬದಲಿಸಿ ಮುಸ್ಲಿಂರಿಗೆ ಶೇ.4 ಮೀಸಲಾತಿ ಕಲ್ಪಿಸುವಂತಹ ಕೆಲಸಕ್ಕೆ ಮುಂದಾಗಿರುವ ಈ ಕಾಂಗ್ರೆಸ್ ಪಕ್ಷ ಉದ್ದೇಶ ಏನೆಂದು ರಾಜ್ಯದ ಜನರಿಗೆ ಅರ್ಥವಾಗುತ್ತಿದೆ. ಸಂವಿಧಾನಕ್ಕೆ ಕಳಂಕ ತರುವ ಪಕ್ಷ ಯಾವುದಾದರೂ ಇದ್ದರೇ ಅದು ಕಾಂಗ್ರೆಸ್ ಪಕ್ಷ , ಕಾಯ್ದೆಯನ್ನು ತಿದ್ದುಪಡಿ ಮಾಡಿ ಮುಸ್ಲಿಂರನ್ನು ತುಷ್ಟೀಕರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.ಬಿಜೆಪಿ ಮುಖಂಡರಾದ ಲಕ್ಷ್ಮೀ ಇನಾಮದಾರ ಮಾತನಾಡಿದರು. ಬಿಜೆಪಿ ಮಂಡಲ ಅಧ್ಯಕ್ಷ ಶ್ರೀಕರ ಕುಲಕರ್ಣಿ ಮಾತನಾಡಿದರು.

ಮಂಡಲದ ಮಾಜಿ ಅಧ್ಯಕ್ಷ ಡಾ.ಬಸವರಾಜ ಪರವಣ್ಣನವರ ಮಾತನಾಡಿದರು.

ಮುಖಂಡರಾದ ಉಳವಪ್ಪ ಉಳ್ಳಿಗಡ್ಡಿ, ಸಂದೀಪ ದೇಶಪಾಂಡೆ, ಅಪ್ಪಣ್ಣ ಪಾಗಾದ, ಶಿವಾನಂದ ಹನುಮಸಾಗರ, ಬಸವರಾಜ ಮಾತನವರ, ರವಿರಾಜ ಇನಾಮದಾರ, ರಮೇಶ ಉಗರಖೋಡ್, ಸಿದ್ದು ಬೋಳನ್ನವರ, ದಿನೇಶ ವಳಸಂಗ ಹಾಗೂ ಬಿಜೆಪಿಯ ಪಪಂ ಸದ್ಯಸರು, ಕಾರ್ಯಕರ್ತರು ಸೇರಿದಂತೆ ಇತರರಿದ್ದರು.

ಶಿಂದೋಗಿ ಗ್ರಾಪಂ ನೂತನ ಸಭಾಭವನ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಮುನವಳ್ಳಿ

ಮುಂದಿನ ದಿನಮಾನಗಳಲ್ಲಿ ಶಿಂದೋಗಿ ಗ್ರಾಮ ಪಂಚಾಯತಿಯಲ್ಲಿ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳಾಗಲಿ. ಅದಕ್ಕೆ ಬೇಕಾದಂತ ಎಲ್ಲಸೌಲಭ್ಯ, ಸಹಕಾರಗಳನ್ನು ನಾನು ಮಾಡುತ್ತೇನೆ. ರಸ್ತೆ ಕಾಮಗಾರಿಗೆ ₹3.5 ಕೋಟಿ ಜಾರಿಯಾಗಿದೆ. ಇನ್ನೂ ಹಲವು ಕಾಮಗಾರಿಗಳು ಆಗಬೇಕಿದ್ದು, ಅತಿಶೀಘ್ರದಲ್ಲಿ ಕಾಮಗಾರಿಗಳನ್ನು ಚಾಲನೆ ತರುವ ಹಾಗೆ ನಾನು ಮಾಡುತ್ತೇನೆ ಎಂದು ಶಾಸಕ ವಿಶ್ವಾಸ ವೈದ್ಯ ಭರವಸೆ ನೀಡಿದರು.

ಶಿಂದೋಗಿ ಗ್ರಾಮ ಪಂಚಾಯತಿ ನೂತನ ಸಭಾಭವನವನ್ನು ಸೋಮವಾರ ಉದ್ಘಾಟಿಸಿ ಮಾತನಾಡಿದ ಅವರು, ಈ ಸಭಾಭವನವು ತಾಲೂಕು ಪಂಚಾಯತಿ ಕೊಡಡಿಯ ಹಾಗೆ ಸುಂದರವಾಗಿ ನಿರ್ಮಾಣ ಮಾಡಿದ್ದಿರಿ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಕಾರ್ಯನಿರ್ವಾಹಕ ಅಧಿಕಾರಿ ಆನಂದ ಬಡಕುಂದ್ರಿ, ಸಹಾಯಕ ನಿರ್ದೇಶಕರು ರಾಮಪ್ಪ ರಕ್ಕಸಗಿ, ಆರ್.ಎ.ಪಾಟೀಲ, ಗ್ರಾಮ ಪಂಚಾಯತಿ ಅಧ್ಯಕ್ಷ ಡಿ.ಡಿ.ಟೋಪೋಜಿ, ಶಕುಂತಲಾ ಬಂಡಿವಡ್ಡರ್, ಪಿಡಿಒ ರಮೇಶ ಬೇಡಸೂರ, ಗ್ರಾಪಂ ಸದಸ್ಯರಾದ ಈಶ್ವರ ಯಕ್ಕೇರಿ, ಬಸವರಾಜ ಮಾಯಪ್ಪನವರ, ಕಲ್ಲಪ್ಪ ಕುರುಬಗಟ್ಟಿ, ಮಲ್ಲಿಕಾರ್ಜುನ ದಸ್ತಿ, ಮುಶಪ್ಪ ಮುಷನ್ನವರ, ಫಕೀರಪ್ಪಮಾದರ, ಮಾಯವ್ವ ಟೋಪೋಜಿ, ನಿಂಗವ್ವ ಟೋಪೋಜಿ, ಸಿದ್ದವ್ವ ಚನ್ನವ್ವಗೋಕಾವಿ, ಗುಡುಮಾ ಶರೆಗಾರ, ಲಕ್ಷ್ಮವ್ವ ತಳವಾರ, ಕಿರಣ ಶಿಂದೆ ಹಾಗೂ ಸಿಬ್ಬಂದಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

ಸಂ. ಬೆನಪ್ರಾ/ಯೋ/ಭೂಬ/ಪ್ರಕಟಣೆ/2024–25/3864 ದಿನಾಂಕ: 18/03/2025

ಪ್ರಕಟಣೆ

ಬೆಳಗಾವಿ ಮಹಾಯೋಜನೆ ಪರಿಷ್ಕೃತ–2 ರ ವ್ಯಾಪ್ತಿಯಲ್ಲಿ ಬರುವ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗವನ್ನು ವಸತಿ ಉದ್ದೇಶಕ್ಕೆ ಸಾರ್ವಜನಿಕ ಹಿತಾಸಕ್ತಿಯ ಮೇರೆಗೆ ಬದಲಾವಣೆ ಮಾಡಲು ಅರ್ಜಿದಾರರು ಮನವಿ ಸಲ್ಲಿಸಿದ್ದು, ವಿವರಣೆ ಕೆಳಗಿನಂತಿರುತ್ತದೆ.

ಕ್ರ. ಸಂ.	ರಿ.ಸ.ನಂ. ಹಾಗೂ ಅರ್ಜಿದಾರರ ಹೆಸರು	ಕ್ಷೇತ್ರ	ಮಹಾಯೋಜನೆ ಪರಿಷ್ಕೃತ–2 ರಲ್ಲಿನ ಭೂ ಉಪಯೋಗ	ಅರ್ಜಿದಾರರು ಬದಲಾವಣೆ ಕೋರಿರುವ ಭೂ ಉಪಯೋಗ
1	ಬಸವನ ಕುಡಚಿ ಗ್ರಾಮದ ರಿ.ಸ.ನಂ. 53/1 ಅರ್ಜಿದಾರರು: ಶ್ರೀ ಚಾರಕಲಾ ಡೆವಲಪರ್ಸ್	ಕ್ಷೇತ್ರ: 35 ಗುಂಟೆ	ಕೃಷಿ	ವಸತಿ

ಸದರಿ ಜಾಗೆಯನ್ನು ಮೇಲ್ಕಾಣಿಸಿದಂತೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಸಾರ್ವಜನಿಕರ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ, ಈ ಪ್ರಕಟಣೆಯಾದ ದಿನಾಂಕದಿಂದ 16 (ಹದಿನಾರು) ದಿನಗಳೊಳಗಾಗಿ ಆಯುಕ್ತರು ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ ಇವರಿಗೆ ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರ, ಬೆಳಗಾವಿ

ಆರ್.ಎ. ನಂ. 9/2023

ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಸವದತ್ತಿ ಇವರ ನ್ಯಾಯಾಲಯದಲ್ಲಿ ಸಾ: ಸವದತ್ತಿ

ಶ್ರೀ ಮಲ್ಲಪ್ಪ ತಾತಪ್ಪ ಜಮನಾಳ ಮತ್ತು ಇನ್ನೊಬ್ಬರು ...ಮೇಲ್ಮನವಿದಾರರು
ವಿರುದ್ಧ
ಶ್ರೀಮತಿ ನೀಲವ್ವ ಕೋಂ. ಭರಮಪ್ಪ ದಡ್ಡಿ ಮತ್ತು ಇತರರು ...ಎದುರುದಾರರು

ಎರಡನೇ ಎದುರುದಾರ :
ಶ್ರೀ ಬಸಪ್ಪ ತಾತಪ್ಪ ಜಮನಾಳ
ವಯೋ: 63 ವರ್ಷ, ಉದ್ಯೋಗ: ಶೇತ್ರಿ
ಸಾ: ರುದ್ರಾಪುರ, ತಾ: ಸವದತ್ತಿ, ಜಿ: ಬೆಳಗಾವಿ

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20ರ ಅಡಿಯಲ್ಲಿ ನೋಟಿಸು

ಮೇಲ್ಕಂಡ ಪ್ರಕರಣದಲ್ಲಿ 1ನೇ ಎದುರುದಾರಳು ಒಟ್ಟು ಮನೆತನದ ಆಸ್ತಿಗಳ ಮೇಲೆ ಪಾಲು ವಾಟ್ಸ್ ದಾವೆಯನ್ನು ಮಾಡಿ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಸವದತ್ತಿಯಲ್ಲಿ ಅಸಲು ದಾವೆ ನಂ. 121/2017ನ್ನು ದಾಖಲಿಸಿ ಮನೆತನದ ಆಸ್ತಿಗಳಲ್ಲಿ ಪಾಲು ವಾಟ್ಸ್ ಆದೇಶವನ್ನು ಪಡೆದಿದ್ದು, ಸದರ ಆದೇಶದ ವಿರುದ್ಧ ಮೇಲ್ಮನವಿದಾರರು ಮೇಲ್ಕಾಣಿಸಿದ ಪ್ರಕರಣವನ್ನು ದಾಖಲಿಸಿದ್ದು ಇರುತ್ತದೆ.

ಎರಡನೇ ಎದುರುದಾರನಾದ ಶ್ರೀ ಬಸಪ್ಪ ತಾತಪ್ಪ ಜಮನಾಳ ಸಾ: ರುದ್ರಾಪುರ ಇವರಿಗೆ ನೋಟಿಸು ಮುಟ್ಟದ ಕಾರಣ, ಸದರಿಯವರು ದಿನಾಂಕ **11/06/2025** ರಂದು ಮುಂಜಾನೆ 10:30 ಘಂಟೆಗೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ ಸವದತ್ತಿ ಇವರ ನ್ಯಾಯಾಲಯದಲ್ಲಿ ಹಾಜರಾಗಿ ತಮ್ಮ ತಕರಾರು ಇದ್ದಲ್ಲಿ ಸಲ್ಲಿಸಬಹುದು ಎಂದು ಕೊಟ್ಟ ನೋಟಿಸು.

ಇವತ್ತಿನ ದಿವಸ 25/03/2025 ರಂದು ನ್ಯಾಯಾಲಯದ ಮೋಹರ ಮತ್ತು ಸಹಿಯೊಂದಿಗೆ ನೀಡಲಾಯಿತು.

ಸವದತ್ತಿ, ದಿನಾಂಕ: 25/03/2025

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶಿರಸ್ತೆದಾರರು, ಹಿ. ದಿ. ನ್ಯಾ., ಸವದತ್ತಿ
ಸಹಿ/– (ಶ್ರೀ ಎಂ. ಎಸ್. ವಂಟಮೂರಿ)
ಮೇಲ್ಮನವಿದಾರರ ಪರ ವಕೀಲರು
Seal

ಅಸಲ ದಾವಾ ನಂ. 279/2025

ಮಾನ್ಯ 1ನೇಯ ದಿವಾಣಿ ನ್ಯಾಯಾಧೀಶರು ಬೆಳಗಾವಿ ಇವರ ನ್ಯಾಯಾಲಯದಲ್ಲಿ ಸಾ: ಬೆಳಗಾವಿ

1) ಶ್ರೀ ರಾಯಪ್ಪ ಮಲ್ಲಪ್ಪ ಮುತಗಿ ...ವಾದಿ
ವಿರುದ್ಧ
1) ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಹಾಗೂ ಇನ್ನೊಬ್ಬರು ...ಪ್ರತಿವಾದಿಯರು

ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 5 ನಿಯಮ 20(1ಎ) ರ ಕೆಳಗೆ ಸಮನ್ಸ್

ಸದರಿ ದಾವೆಯಲ್ಲಿ ಮೃತ ಪಾರ್ವತೆವ್ವ ತಂದೆ: ಮಲ್ಲಪ್ಪ ಮುತಗಿ ಇವರು ದಿನಾಂಕ: 08/10/2010 ರಂದು ಮುತ್ನಾಳ ಗ್ರಾಮದಲ್ಲಿ ಮೃತವಾಗಿದ್ದು ಇರುತ್ತದೆ. ಮೃತಳಿಗೆ ಶ್ರೀ ರಾಯಪ್ಪ ಮಲ್ಲಪ್ಪ ಮುತಗಿ ಇವನು ಮಾತ್ರ ವಾರಸುದಾರ ಇರುತ್ತಾನೆ. ಸದರಿ ದಾವೆಯು ದಿನಾಂಕ: **21/04/2025** ರಂದು ನಿಗದಿಪಡಿಸಲಾಗಿದೆ. ಸದರಿ ದಿನಾಂಕದಂದು ಮುಂಜಾನೆ 11:00 ಘಂಟೆಗೆ ಮೃತ ಪಾರ್ವತೆವ್ವ ತಂದೆ: ಮಲ್ಲಪ್ಪ ಮುತಗಿ ಇವಳಿಗೆ ಯಾರಾದರು ವಾರಸುದಾರರು ಇದ್ದಲ್ಲಿ ತಾವು ಸ್ವತಃ ಆಗಲಿ ಅಥವಾ ತಮ್ಮ ನ್ಯಾಯವಾದಿಗಳ ಮುಖಾಂತರವಾಗಲಿ ಹಾಜರಾಗಬೇಕು. ಇದಕ್ಕೆ ತಾವು ತಪ್ಪಿದಲ್ಲಿ ಮಾನ್ಯ ನ್ಯಾಯಾಲಯವು ಸದರ ದಾವೆಯನ್ನು ಏಕತರ್ಫಿಯಾಗಿ ನಿಕಾಲಿಯಾಗುವುದು ಇತ್ಯರ್ಥ ಪಡಿಸಲಾಗುವುದು ಅಂತಾ ಕೊಟ್ಟ ಸಾರ್ವಜನಿಕ ಪ್ರಕಟಣೆ.

ಮಾನ್ಯ ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ನೀಡಲಾಯಿತು.

ಸ್ಥಳ: ಬೆಳಗಾವಿ, ದಿನಾಂಕ: 22/03/2025

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– (ವಿ. ಎಸ್. ಸಕ್ತೆನವರ), ಶಿರಸ್ತೆದಾರ
ಮಾ.ಪ್ರ.ದಿ.ನ್ಯಾ. ನ್ಯಾಯಾಲಯ ಬೆಳಗಾವಿ
ಸಹಿ/– (ಎಸ್. ಜಿ. ಆರೇರ), ಬೆಂಚ್ ಕ್ಲರ್ಕ್
ಮಾ.ಪ್ರ.ದಿ.ನ್ಯಾ. ನ್ಯಾಯಾಲಯ ಬೆಳಗಾವಿ
ಸಹಿ/– (ಎಸ್. ಎಂ. ಸುಳೇಭಾವಿ)
ವಾದಿಯ ಪರ ನ್ಯಾಯವಾದಿಗಳು
Seal

ಐಡಿಎಫ್‌ಸಿ ಫಸ್ಟ್ ಬ್ಯಾಂಕ್ ಅಮಿಟೆಡ್
(ಹಿಂದಿನ ಕ್ಯಾಪಿಟಲ್ ಫಸ್ಟ್ ಲಿಮಿಟೆಡ್ ಮತ್ತು ಐಡಿಎಫ್‌ಸಿ ಬ್ಯಾಂಕ್ ಲಿಮಿಟೆಡ್‌ನೊಂದಿಗೆ ಸಂಯೋಜಿಸಲಾಗಿದೆ